## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 116 |
| ಸದಸ್ಯರ ಹೆಸರು | : | ಡಾ. ಯತೀಂದ್ರ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 09.12.2024 |
| ಉತ್ತರಿಸುವವರು | : | ಮಾನ್ಯ ಉನ್ನತ ಶಿಕ್ಷಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸ್ತುತ ಸರ್ಕಾರಿ ಮತ್ತು ಇನ್ನಿತರ ನೌಕರಿ ಹಾಗೂ ಉನ್ನತ ಶಿಕ್ಷಣ ಪಡೆಯಲು ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಅತ್ಯವಶ್ಯವಾಗಿದ್ದು, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಉನ್ನತ ಶಿಕ್ಷಣ ಇಲಾಖೆಯು ಈ ಕೆಳಕಂಡ ಟೆಲಿಗ್ರಾಂ ಮತ್ತು ಯೂಟ್ಯೂಬ್ ಚಾನೆಲ್‌ಗಳ ಮೂಲಕ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮಾರ್ಗದರ್ಶನ ನೀಡಲಾಗುತ್ತಿದೆ. ಅಂತಹ ಟೆಲಿಗ್ರಾಂ ಮತ್ತು ಯೂಟ್ಯೂಬ್ ಚಾನೆಲ್‌ಗಳ ವಿವರಗಳು ಈ ಕೆಳಕಂಡಂತಿವೆ.<br>**ಅ) ವಿಜಯೀ ಭವ ಟೆಲಿಗ್ರಾಂ ಚಾನೆಲ್:**<br>ರಾಜ್ಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧರಾಗುವ ಯುವಕ ಮತ್ತು ಯುವತಿಯರಿಗೆ PDF ನೋಟ್ಸ್ ನೀಡುವ ಮತ್ತು ಪ್ರತಿ ಭಾನುವಾರ ಮಾದರಿ ಟೆಸ್ಟ್ ನಡೆಸುವ ಮೂಲಕ ಆತ್ಮವಿಶ್ವಾಸ ಹೆಚ್ಚಿಸುವ ಉದ್ದೇಶದಿಂದ ಜೂನ್-2023 ರಲ್ಲಿ ಇಲಾಖೆಯ ವತಿಯಿಂದ ಟೆಲಿಗ್ರಾಂ ಚಾನಲ್ ಆರಂಭಿಸಲಾಯಿತು. ಪ್ರಸ್ತುತ 1.3 ಲಕ್ಷ ಸ್ಪರ್ಧಾರ್ಥಿಗಳು ಚಂದಾದಾರರಾಗಿದ್ದು, 6000 ಪುಟಗಳಷ್ಟು ಅಧ್ಯಯನ ಸಾಮಗ್ರಿಯನ್ನು ಒದಗಿಸಲಾಗಿದೆ ಹಾಗೂ 70 ಟೆಸ್ಟ್‌ಗಳನ್ನು ನಡೆಸಿದ್ದು 6.5 ಲಕ್ಷ ಅಭ್ಯರ್ಥಿಗಳು ಟೆಸ್ಟ್ ನಲ್ಲಿ ಭಾಗವಹಿಸಿರುತ್ತಾರೆ.<br>**ಆ) ವಿಜಯ ಪಥ ಯೂಟ್ಯೂಬ್ ಚಾನೆಲ್:**<br>ಕೇಂದ್ರ ಸರ್ಕಾರದ ಹುದ್ದೆಗಳನ್ನೇ ವಿಶೇಷವಾಗಿ ಗುರಿಯಾಗಿಸಿಕೊಂಡು ರಾಜ್ಯದ ಯುವಕ ಮತ್ತು ಯುವತಿಯರಿಗೆ ಆನ್‌ಲೈನ್ ಕೋಚಿಂಗ್ ನೀಡಲು ವಿಜಯಪಥ ಯೂಟ್ಯೂಬ್ ಚಾನೆಲ್ ಅನ್ನು ಜುಲೈ-2023 ರಲ್ಲಿ ಪ್ರಾರಂಭಿಸಲಾಯಿತು. ಪ್ರಸ್ತುತ ಈ ಚಾನಲ್‌ಗೆ 1.8 ಲಕ್ಷ ಸ್ಪರ್ಧಾರ್ಥಿಗಳು ಚಂದಾದಾರರಾಗಿದ್ದು, 220 ವಿಡಿಯೋ ಕ್ಲಾಸ್‌ಗಳನ್ನು ನೀಡಲಾಗಿದೆ. ಈ ತರಗತಿಗಳನ್ನು 85 ಲಕ್ಷ ಬಾರಿ ವೀಕ್ಷಿಸಲಾಗಿದೆ. |

| | | |
|---|---|---|
| | | **ಇ) ವಿಜಯೀ ಭವ ಯೂಟ್ಯೂಬ್ ಚಾನೆಲ್:**<br>ರಾಜ್ಯ ಸರ್ಕಾರದ ಹುದ್ದೆಗಳನ್ನೇ ವಿಶೇಷವಾಗಿ ಗುರಿಯಾಗಿಸಿಕೊಂಡು ರಾಜ್ಯದ ಯುವಕ ಮತ್ತು ಯುವತಿಯರಿಗೆ ಆನ್ ಲೈನ್ ಕೋಚಿಂಗ್ ನೀಡಲು ವಿಜಯೀ ಭವ ಯೂಟ್ಯೂಬ್ ಚಾನೆಲ್ ಅನ್ನು ಆಗಸ್ಟ್ 2023ನೇ ಇಸವಿಯಿಂದ ಪ್ರಾರಂಭಿಸಲಾಗಿದೆ. ಸದರಿ ಅವಧಿಯಲ್ಲಿ ಈ ಚಾನಲ್ ಗೆ 5.30 ಲಕ್ಷ ಸ್ಪರ್ಧಾರ್ಥಿಗಳು ಚಂದಾದಾರರಾಗಿದ್ದು, 650 ವಿಡಿಯೋ ಕ್ಲಾಸ್‌ಗಳನ್ನು ನೀಡಲಾಗಿದೆ. ಈ ತರಗತಿಗಳನ್ನು 3.5 ಕೋಟಿ ಬಾರಿ ವೀಕ್ಷಿಸಲಾಗಿದೆ.<br>ಯೂಟ್ಯೂಬ್ ಚಾನಲ್‌ನ ಚಂದಾದಾರಿಕೆ 1 ಲಕ್ಷ ಆದಾಗ, ಕಂಪೆನಿಯಿಂದ ನೀಡಲಾಗುವ "ಸಿಲ್ವರ್ ಪ್ಲೇ ಬಟನ್"ಗಳಲ್ಲಿ ತಲಾ ಒಂದರಂತೆ 2 ಬಟನ್‌ಗಳನ್ನು ವಿಜಯೀಭವ ಮತ್ತು ವಿಜಯಪಥ ಯೂಟ್ಯೂಬ್ ಚಾನೆಲ್‌ಗಳು ಪಡೆದಿವೆ. |
| **ಆ)** | ಪ್ರಥಮ ದರ್ಜೆ ಕಾಲೇಜುಗಳ ಪಠ್ಯಕ್ರಮದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ವಿಷಯಗಳನ್ನು ಅಳವಡಿಸಿಕೊಳ್ಳಲಾಗಿದೆಯೇ: ಇಲ್ಲವಾದಲ್ಲಿ, ಈ ಕುರಿತು ಯಾವುದಾದರೂ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? | ಪ್ರಥಮ ದರ್ಜೆ ಕಾಲೇಜುಗಳಲ್ಲಿ ಬೋಧಿಸುತ್ತಿರುವ ವಿಷಯಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಅಂಶಗಳನ್ನು ವಿಶ್ವವಿದ್ಯಾನಿಲಯಗಳ ಸ್ನಾತಕ ಮತ್ತು ಸ್ನಾತಕೋತ್ತರ ಪಠ್ಯಕ್ರಮಗಳಲ್ಲಿ ಈಗಾಗಲೇ ಅಳವಡಿಸಿಕೊಳ್ಳಲಾಗಿದೆ.<br><br>ಮುಂದುವರೆದು, ಸದರಿ ಕಾಲೇಜುಗಳಲ್ಲಿ ಪ್ರತ್ಯೇಕವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳ ವಿಷಯಗಳನ್ನು ಅಳವಡಿಸಿಕೊಳ್ಳುವ ಯಾವುದೇ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಮುಂದೆ ಇರುವುದಿಲ್ಲ. |

**ಸಂಖ್ಯೆ:ಇಡಿ 386 ಡಿಸಿಇ 2024(ಇ)**

(ಡಾ ಎಂ.ಸಿ ಸುಧಾಕರ್)
ಉನ್ನತ ಶಿಕ್ಷಣ ಸಚಿವರು,